## ಮಾತಿನ ಬೆಳವಣಿಗೆ

- **ಮೂರು ತಿಂಗಳುಗಳು:** 'ಕೂ' ಶಬ್ದ ಮಾಡುತ್ತದೆ.
- **ನಾಲ್ಕು ತಿಂಗಳುಗಳು:** ಶಬ್ದ ಹೊರಡಿಸಿ ಜೋರಾಗಿ ನಗುತ್ತದೆ.
- **ಐದು ತಿಂಗಳುಗಳು:** ಮ, ಪ, ದ ಮುಂತಾದ ಒಂದಕ್ಷರದ ಮಾತು ಪ್ರಾರಂಭಿಸುತ್ತದೆ.
- **ಹತ್ತು ತಿಂಗಳುಗಳು:** ಮಮ, ಪಪ, ದದ ಎಂಬ ಎರಡಕ್ಷರಗಳ ಮಾತುಗಳನ್ನಾಡಲು ಪ್ರಾರಂಭಿಸುತ್ತದೆ.
- **ಒಂದು ವರ್ಷ:** ಅನ್ನ, ನೀರು, ಹಾಲು ಮುಂತಾದ ಒಂದೆರಡು ಅರ್ಥಪೂರ್ಣ ಪದಗಳನ್ನಾಡತೊಡಗುತ್ತದೆ.

## ದೃಷ್ಟಿ ಮತ್ತು ಶ್ರವಣ

ನಾಲ್ಕು ತಿಂಗಳುಗಳಲ್ಲಿ 180 ಡಿಗ್ರಿ ಕೋನದಲ್ಲಿ ದೃಷ್ಟಿ ಹೊರಳಿಸಬಲ್ಲದು. ಹನ್ನೆರಡು ವಾರಗಳಲ್ಲಿ ಎರಡೂ ಕಣ್ಣಿನಿಂದ ನೋಡಬಲ್ಲದು. ಮೂರರಿಂದ ನಾಲ್ಕು ತಿಂಗಳಿಗೆ ಶಬ್ದ ಬಂದತ್ತ ಕತ್ತು ಹೊರಳಿಸಬಲ್ಲದು. ಹತ್ತು ತಿಂಗಳಲ್ಲಿ ಶಬ್ದ ಬಂದೆಡೆ ನೇರವಾಗಿ ನೋಡಬಲ್ಲದು. ಅವಧಿ ಪೂರ್ವವಾಗಿ ಜನಿಸಿದ ಮಗುವಿನಲ್ಲಿ ರೆಟಿನಾದ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಿಸಬೇಕು ಮತ್ತು ತೀವ್ರ ಸ್ವರೂಪದ ನವಜಾತ ಶಿಶುವಿನ ಕಾಮಾಲೆಗೆ ತುತ್ತಾದ ಮಗುವನ್ನು ಕಡ್ಡಾಯವಾಗಿ 'ಬೆರಾ' ಎಂಬ ಶ್ರವಣ ಪರೀಕ್ಷೆಗೆ ಒಳಪಡಿಸಬೇಕು.








## ಕಾಡುವ ಕೆಲವು ಸಾಮಾನ್ಯ ಸಮಸ್ಯೆಗಳು

ಜನಿಸಿದ ನಂತರ ಮಲ ವಿಸರ್ಜನೆಯಾಗಲು ಇಪ್ಪತ್ನಾಲ್ಕು ಗಂಟೆಗಳು ಮತ್ತು ಮೂತ್ರ ವಿಸರ್ಜನೆಯಾಗಲು ನಲವತ್ತೆಂಟು ಗಂಟೆಗಳವರೆಗೆ ಕಾಯಬಹುದು. ಆ ನಂತರವೂ ವಿಸರ್ಜನೆಯಾಗದಿದ್ದರೆ ಕೆಲವು ಗಂಭೀರ ಸಮಸ್ಯೆಗಳನ್ನು ಪರಿಗಣಿಸಬೇಕು.



### ನವಜಾತ ಶಿಶುವಿನ ರಕ್ತಸ್ರಾವ

ಸಾಮಾನ್ಯವಾಗಿ ಮೊದಲ ವಾರದಲ್ಲಿ ಕೆಲವು ಶಿಶುಗಳಲ್ಲಿ ಬಾಯಿ, ಗುದದ್ವಾರ ಮುಂತಾದ ಕಡೆಗಳಿಂದ ರಕ್ತಸ್ರಾವವಾಗುತ್ತದೆ. ಕೆಲವೊಮ್ಮೆ ಮಿದುಳಿನಲ್ಲಿಯೂ ರಕ್ತಸ್ರಾವವಾಗಿ ಜೀವಕ್ಕೆ ಅಪಾಯವಾಗಬಹುದು. ಎದೆಹಾಲಿನಲ್ಲಿ 'ಕೆ' ಜೀವಸತ್ವ ಅತ್ಯಂತ ಕಡಿಮೆ ಪ್ರಮಾಣದಲ್ಲಿರುವುದು ಮತ್ತು 'ಕೆ' ಜೀವಸತ್ವ ಅವಲಂಬಿತ ರಕ್ತ ಹೆಪ್ಪುಗಟ್ಟುವಿಕೆಯ ಅಂಶಗಳು ಉತ್ಪತ್ತಿಯಾಗುವ ಯಕೃತ್ತಿನ ಅಸಮರ್ಪಕ ಬೆಳವಣಿಗೆಯೇ ಇದಕ್ಕೆ ಕಾರಣ. ಎಲ್ಲಾ ನವಜಾತ ಶಿಶುಗಳಿಗೂ 'ಕೆ' ಜೀವಸತ್ವದ ಚುಚ್ಚುಮದ್ದನ್ನು ಕಡ್ಡಾಯವಾಗಿ ನೀಡುವುದರ ಮೂಲಕ ಈ ಸಮಸ್ಯೆಯನ್ನು ತಡೆಗಟ್ಟಬಹುದು.

### ನವಜಾತ ಶಿಶುವಿನ ಕಾಮಾಲೆ

ಜನಿಸಿದ ಮೊದಲ ದಿನವೇ ಕಾಮಾಲೆ



ಕಾಣಿಸಿಕೊಳ್ಳಲು ಆರ್ ಎಚ್ ರಕ್ತ ಗುಂಪಿನ 'ತಪ್ಪು ಹೊಂದಾಣಿಕೆ'ಯಂಥ ಹಲವಾರು ಗಂಭೀರ ಸ್ವರೂಪದ ಸಮಸ್ಯೆಗಳಿರುತ್ತವೆ. ಇವುಗಳನ್ನು ಸಕಾಲದಲ್ಲಿ ಗುರುತಿಸಿ ಚಿಕಿತ್ಸೆ ನೀಡದಿದ್ದರೆ ಸೆರೆಬ್ರಲ್ ಪಾಲ್ಸಿ, ಕಿವುಡುತನ ಮುಂತಾದ ಸಮಸ್ಯೆಗಳಿಗೆ ಮಗು ತುತ್ತಾಗಬಹುದು.

ಕೆಂಪು ರಕ್ತಕಣಗಳ ಛಿದ್ರಗೊಳ್ಳುವಿಕೆ, ಯಕೃತ್ತಿನ ಅಸಮರ್ಪಕ ಬೆಳವಣಿಗೆ ಮುಂತಾದ ಕೆಲವು ಕಾರಣಗಳಿಂದ ಬಹುತೇಕ ಶಿಶುಗಳಲ್ಲಿ ಕಾಮಾಲೆ